# ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತು ಸದಸ್ಯರಾದ ಮಾನ್ಯ ಡಾ: ಸೂರಜ್ ರೇವಣ್ಣ ಇವರು ನಿಯಮ-330 ರಡಿ ನೀಡಿರುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಉತ್ತರ.**

**ವಿಷಯ:** ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ಬಳದರೆ ಗ್ರಾಮ ಪಂಚಾಯತಿ ಪಂಚಾಯತಿ ವ್ಯಾಪ್ತಿಯ ಬಳದರೆ ಗ್ರಾಮದ ಸರ್ವೆ ನಂಬರ್ 260 ರಲ್ಲಿ ಅನಧಿಕೃತವಾಗಿ ಪೂರ್ವಾನುಮತಿಯನ್ನು ಪಡೆಯದೇ ಇಲಾಖಾ ಮಾನದಂಡವನ್ನು ಮೀರಿ ನಿರ್ಮಿಸಿರುವ ಕಟ್ಟಡಕ್ಕೆ ನಗರ ಗ್ರಾಮಾಂತರ ಯೋಜನಾ ಪ್ರಾಧಿಕಾರದಿಂದ ನಕ್ಷೆ ಮತ್ತು ವಿನ್ಯಾಸ ಅನುಮೋದಿಸಿರುವುದರಿಂದ ಕರ್ನಾಟಕ ಭೂ-ಕಂದಾಯ ಕಾಯ್ದೆ1993 ರ ಪ್ರಕರಣ 64 ಉಲ್ಲಂಘನೆಯಾಗಿರುತ್ತದೆ.

ಈ ಬಗ್ಗೆ ಭೂ-ಪರಿವರ್ತನೆ ಮೊದಲೇ ಸಂಬಂಧಿಸಿದ ಸರ್ವೆ ನಂಬರ್‌ನಲ್ಲಿ ಕಟ್ಟಡ ನಿರ್ಮಾಣಗೊಂಡಿರುವುದನ್ನು ನಗರ ಮತ್ತು ಯೋಜನಾ ಪ್ರಾಧಿಕಾರ ಹಾಸನದವರು ಮಾನ್ಯ ಜಿಲ್ಲಾಧಿಕಾರಿಯವರಿಗೆ ವರದಿ ನೀಡಿದ್ದು ಅದನ್ನು ಭೂ ಮಾಲೀಕರು ಅಫಿಡವೇಟ್ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಮುಚ್ಚಳಿಕೆ ನೀಡಿ, ಒಂದು ಪಕ್ಷ ಕಾನೂನಿನ ಉಲ್ಲಂಘನೆಯಾದಲ್ಲಿ ಸ್ವತಃ ನಾವೇ ಕಟ್ಟಡವನ್ನು ತೆರವುಗೊಳಿಸಿ ಇಲಾಖಾ ನಿಯಮದಂತೆ ನಡೆಯುವುದಾಗಿ ತಿಳಿಸಿದ್ದರೂ ಸಹ ಮೇಲ್ಕಂಡ ಸಕ್ಷಮ ಪ್ರಾಧಿಕಾರದವರಿಂದ ಕಾನೂನಿನ ಉಲ್ಲಂಘನೆಯಾಗಿರುವ ಬಗ್ಗೆ.

**ಉತ್ತರ:** ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ಬಳದರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಳದರೆ ಗ್ರಾಮದ ಸರ್ವೆ ನಂ 260 ರಲ್ಲಿ 2.20 ಎಕರೆ ಜಮೀನನ್ನು ಶ್ರೀ ದೀಪಕ್ ಬಿನ್ ಜಯಪಾಲ್ ಮತ್ತು ಶ್ರೀಮತಿ ಜಿ.ಆರ್ ರಾಜಮ್ಮ ಕೋಂ ಬಿ.ಎನ್ ದ್ಯಾವೇಗೌಡರಿಂದ ಭೋಗ್ಯಕ್ಕೆ ಪಡೆದು ಪಂಚಾಯಿತಿಯಿಂದ ಅನುಮತಿ ಪಡೆಯದೆ ಹೋಟೆಲ್ ಉದ್ಯಮ ನಡೆಸಲು ಕಟ್ಟಡ ನಿರ್ಮಾಣ ಪ್ರಾರಂಭಿಸಿರುತ್ತಾರೆ. ಸಾರ್ವಜನಿಕರ ದೂರು ಬಂದ ಹಿನ್ನಲೆಯಲ್ಲಿ ಗ್ರಾಮ ಪಂಚಾಯಿತಿಯಿಂದ ದಿನಾಂಕ:15-11-2022 ರಂದು ಕಟ್ಟಡ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಲು ಮತ್ತು ಸೂಕ್ತ ದಾಖಲಾತಿ ಒದಗಿಸಿ ಅನುಮತಿ ಪಡೆಯಬೇಕೆಂದು ನೋಟಿಸ್ ಜಾರಿ ಮಾಡಲಾಗಿರುತ್ತದೆ.

ಸದರಿಯವರು ದಿ:07/01/2023 ರಂದು ಸದರಿ ಸ.ನಂ 260 ರಲ್ಲಿ ಹೋಟೆಲ್ ಉದ್ಯಮ ನಡೆಸಲು ಜಿಲ್ಲಾಧಿಕಾರಿ ಹಾಸನ ರವರಿಂದ ಭೂ ಪರಿವರ್ತನೆ ಆದೇಶ ಪಡೆದು ಗ್ರಾಮ ಪಂಚಾಯಿತಿ ಕಛೇರಿಯ ಗಮನಕ್ಕೆ ತರದೇ ಕಟ್ಟಡ ನಿರ್ಮಾಣ ಕಾಮಗಾರಿ ಮುಂದುವರೆಸುತ್ತಾರೆ. ತದನಂತರ ಚನ್ನರಾಯಪಟ್ಟಣ ತಾಲ್ಲೂಕು ಪಂಚಾಯಿತಿಗೆ ದೂರುಬಂದ ಹಿನ್ನಲೆಯಲ್ಲಿ ದಿನಾಂಕ:18/01/2023 ರಂದು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಚನ್ನರಾಯಪಟ್ಟಣ ರವರು ಸ್ಥಳಕ್ಕೆ ಭೇಟಿ ನೀಡಿ ದಾಖಲೆ ಪರಿಶೀಲಿಸಿ ಕೃಷಿ ಭೂಮಿಯು ಕೃಷಿಯೇತರ ಚಟುವಟಿಕೆಗೆ ಅನ್ಯಸಂಕ್ರಮಣಗೊಂಡ ನಂತರ ಸಕ್ಷಮ ಯೋಜನಾ ಪ್ರಾಧಿಕಾರದಿಂದ ನಕ್ಷೆ ಅನುಮೋದನೆ ಆಗದ ಹೊರತು ಯಾವುದೇ ಅನುಮತಿ ನೀಡಬಾರದೆಂದು ಪಂಚಾಯಿತಿಗೆ ಸೂಚಿಸಲಾಗಿರುತ್ತದೆ. ಹಾಗಾಗಿ ಸದರಿಯವರು ದಿ:31/01/2023 ರಂದು ಗ್ರಾಮ ಪಂಚಾಯಿತಿ ಕಛೇರಿಗೆ ಅರ್ಜಿ ಸಲ್ಲಿಸಿ 2.20 ಗುಂಟೆ ಜಾಗಕ್ಕೆ ಇ-ಸ್ವತ್ತು ಮಾಡಿಕೊಡಲು ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಗ್ರಾಮ ಪಂಚಾಯಿತಿಯವರು ಯೋಜನಾ ಪ್ರಾಧಿಕಾರದಿಂದ ಅನುಮೋದನೆ ನಕ್ಷೆ ಇಲ್ಲದ ಕಾರಣ ಸದರಿ ಅರ್ಜಿಯನ್ನು ದಿನಾಂಕ:22/02/2023 ರಂದು ತಿರಸ್ಕರಿಸಿ ಹಿಂಬರಹ ನೀಡಿರುತ್ತಾರೆ.

ನಂತರ ಶ್ರೀ ದೀಪಕ್ ಬಿನ್ ಜಯಪಾಲ್ ರವರು ದಿನಾಂಕ:20/04/2023 ರಂದು ಮಾನ್ಯ ಉಚ್ಚ ನ್ಯಾಯಾಲಯದಿಂದ ಮ್ಯಾಂಡಮಸ್ ಆದೇಶ ಪಡೆದು ಮತ್ತು ದಿನಾಂಕ:30/05/2023 ರಂದು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ನಕ್ಷೆ ಅನುಮೋದನೆ ಪಡೆದು ದಿನಾಂಕ:30/05/2023 ರಂದು ಸದರಿ ಸ್ವತ್ತಿಗೆ ಇ-ಸ್ವತ್ತು ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ, ಆದರೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ನಕ್ಷೆ ಆದೇಶದ ಷರತ್ತು ಸಂಖ್ಯೆ:22 ರಲ್ಲಿ ರಸ್ತೆ ನಿಯಮಾವಳಿಯನ್ವಯ ರಸ್ತೆ ಮಾರ್ಜಿನ್ ಹಾಗೂ ಕಟ್ಟಡ ರೇಖೆ ಜಾಗದಲ್ಲಿ ಕಟ್ಟಡವಿದ್ದು, ರಸ್ತೆ ಮಾರ್ಜಿನ್ ಮತ್ತು ಕಟ್ಟಡ ರೇಖೆಯಲ್ಲಿ ನಿರ್ಮಾಣ ಮಾಡಿರುವ ಕಟ್ಟಡವನ್ನು ತೆರವುಗೊಳಿಸಲು ಸೂಚಿಸಿರುತ್ತಾರೆ.

150ಶ್ರೀ
ಸಿ-330
SL:82

ಸರ್ವೆ ನಂ-260ರ ಪಕ್ಕದಲ್ಲಿರುವ ರಸ್ತೆಯು ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯಾಗಿರುತ್ತದೆ. ಸದರಿ ರಸ್ತೆಗೆ ಸೇರಿದ ಒತ್ತುವರಿ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯವರು ತೆರವುಗೊಳಿಸಬೇಕಾಗಿರುತ್ತದೆ. ಈ ಸಂಬಂಧ ಲೋಕೋಪಯೋಗಿ ಇಲಾಖೆಯವರೊಂದಿಗೆ ಪತ್ರ ವ್ಯವಹಾರ ನಡೆಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಳದರೆ ಗ್ರಾಮ ಪಂಚಾಯಿತಿಯವರು ದಿನಾಂಕ:05/06/2023ರಂದು ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಹಾಸನರವರಿಗೆ ಪತ್ರವನ್ನು ಬರೆದಿರುತ್ತಾರೆ.

ಸಂಖ್ಯೆ:RDPR 366 GPA 2023

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.